2. ಸರ್ವೆ ಕಾರ್ಯಕ್ಕೆ ಮುಂಚಿತವಾಗಿ 1356 ಪ್ರಕರಣಗಳ ಪಹಣಿ ತಿದ್ದುಪಡಿ ಕಾರ್ಯವನ್ನು ಸಹ ಕೈಗೊಳ್ಳಬೇಕಾಗಿದ್ದು, ಸದರಿ ಕೆಲಸವನ್ನು ನಿರ್ವಹಿಸಬೇಕಾಗಿರುವುದರಿಂದ ವಿಳಂಬವಾಗಿರುತ್ತದೆ.
3. ಸರ್ಕಾರದ ಆದೇಶ ಪ್ರಕಾರ ಗ್ರಾಮವಾರು ಪೋಡಿ ಪ್ರಕರಣಗಳು ವಿಲೇವಾರಿ ಮಾಡಿ ಪೋಡಿ ರಹಿತ ಗ್ರಾಮ, ತಾಲ್ಲೂಕು ಎಂದು ಘೋಷಿಸುವ ಪೂರ್ವಭಾವಿಯಾಗಿ ಆಯಾ ಗ್ರಾಮಗಳಲ್ಲಿ ಇರುವ ಎಲ್ಲಾ ದರಖಾಸ್ತು ಪೋಡಿ ಪ್ರಕರಣಗಳ ಬಗ್ಗೆ ನಮೂನೆ–1ರಿಂದ 5ರವರೆಗೆ ಭರ್ತಿ ಮಾಡಿ ಅಳತೆ ಕಾರ್ಯ ಕೈಗೊಳ್ಳಬೇಕೆಂಬ ಷರತ್ತಿರುವುದರಿಂದ ಸದರಿ 1 ರಿಂದ 5ರವರೆಗಿನ ನಮೂನೆಗಳನ್ನು ತಯಾರಿಸುವ ಕೆಲಸ ಕಂದಾಯ ಇಲಾಖೆಯಿಂದ ಪೂರ್ಣಗೊಳಿಸದ ಕಾರಣ ಸರ್ವೆ ಕಾರ್ಯ ವಿಳಂಬವಾಗಿರುತ್ತದೆ.

ಇ) ವಿಳಂಬಕ್ಕೆ ಆಡಳಿತಾತ್ಮಕ ಕಾರಣಗಳಿರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ರೈತರ ಜಮೀನಿನ ಸರ್ವೆ ಕಾರ್ಯವನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ಹೊಸದಾಗಿ 1600 ಜನ ಭೂಮಾಪಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

ಉ) ಹೊಸದಾಗಿ 1600 ಜನ ಭೂಮಾಪಕರ ಹುದ್ದೆಗಳನ್ನು ಮಂಜೂರು ಮಾಡಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕರ್ನಾಟಕ ಪರೀಕ್ಷಾ ನಿಯಂತ್ರಣ ಪ್ರಾಧಿಕಾರವನ್ನು ಸಂಪರ್ಕಿಸಲಾಗಿದೆ. ಭೂಮಾಪಕರ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಆಯ್ಕೆ ಪ್ರಕ್ರಿಯೆನ್ನು ಜರೂರಾಗಿ ಪೂರ್ಣಗೊಳಿಸಲಾಗುವುದೆಂದು ಪ್ರಾಧಿಕಾರವು ತಿಳಿಸಿರುತ್ತದೆ.

ಮುತ್ತುರಾಯನ ಕೆರೆ ಪೋಷಕ ನಾಲೆಗಳ ನಿರ್ಮಾಣಕ್ಕೆ ಜಮೀನು ಭೂಸ್ವಾಧೀನಪಡಿಸಿಕೊಳ್ಳುವುದು

313 (635) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕಿನ ಆತಗೂರು ಹೋಬಳಿಯ ಹೂತಗೆರೆ ಮತ್ತು ಇತರೆ ಗ್ರಾಮಗಳ ಮತ್ತು ರಾಯನಕೆರೆ ಪೋಷಕನಾಲಾ ನಿರ್ಮಾಣಕ್ಕಾಗಿ ಸರ್ಕಾರ ಎಷ್ಟು ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದೆ; (ವಿವರಗಳನ್ನು ನೀಡುವುದು)

ಆ) ಹಾಗಿದ್ದಲ್ಲಿ, ವಶಪಡಿಸಿಕೊಂಡಿರುವ ಎಲ್ಲಾ ಮಾಲೀಕರುಗಳಿಗೆ ಪರಿಹಾರ ಧನ ನೀಡಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳ ಮಾಲೀಕರುಗಳಿಗೆ ಇದುವರೆವಿಗೂ ಪರಿಹಾರ ನೀಡದೇ ಇರುವುದರಿಂದ, ಜಮೀನು ಕಳೆದುಕೊಂಡ ರೈತರು ಪರಿಹಾರದ ಹಣ ಸಿಗದೇ ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದುವರೆವಿಗೂ ಪರಿಹಾರವನ್ನು ನೀಡದೇ ಇರಲು ಕಾರಣಗಳೇನು;

ಉ) ಈ ಜಮೀನುಗಳ ಮಾಲೀಕರುಗಳಿಗೆ ಪರಿಹಾರ ನೀಡಲು ಸರ್ಕಾರಕ್ಕೆ ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಮದ್ದೂರು ತಾಲ್ಲೂಕಿನ ಆತಗೂರು ಹೋಬಳಿಯ ಊತಗೆರೆ ಮತ್ತು ಇತರೆ ಗ್ರಾಮಗಳ ಮುತ್ತುರಾಯನಕೆರೆ ಪೋಷಕನಾಲಾ ನಿರ್ಮಾಣಕ್ಕಾಗಿ ಒಟ್ಟು 53.36 ಎಕರೆ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಗ್ರಾಮದ ಹೆಸರು	ವಿಸ್ತೀರ್ಣ ಎ-ಗುಂ
1	ಕೆಸ್ತೂರು	2.06
2	ನವಿಲೆ	3.17
	ಹೆಬ್ಬೆರಳು	9.08 1/4
	ಅಂಕನಾಥಪುರ	9.28 1/4
3	ಊತಗೆರೆ	22.24
4	ಕೆಸ್ತೂರು	0.07 1/4
5	ಹೆಬ್ಬೆರಳು	0.10
6	ಯರಗನಹಳ್ಳಿ	1.27 1/2
	ಹೆಮ್ಮನಹಳ್ಳಿ	3.21 1/2
	ಹನುಮಂತಪುರ	0.28
	ಕದಲೂರು	0.18
ಒಟ್ಟು		**53.86**

ಆ) ಪರಿಹಾರ ಧನವನ್ನು ಭಾಗಶಃ ಪಾವತಿಸಲಾಗಿದ್ದು ವಿವರ ಕೆಳಕಂಡಂತಿದೆ.

ಕ್ರ. ಸಂ.	ಗ್ರಾಮದ ಹೆಸರು	ಭೂಮಾಲೀಕರ ಹೆಸರು	ಪರಿಹಾರ ಪಾವತಿಸಿರುವುದು	ಪರಿಹಾರ ಪಾವತಿಸಲು ಬಾಕಿ
1	**2**	**3**	**4**	**5**
1	ಕೆಸ್ತೂರು	33	15	18
2	ನವಿಲೆ	10	02	08
	ಹೆಬ್ಬೆರಳು	40	18	22
	ಅಂಕನಾಥಪುರ	75	24	51
3	ಊತಗೆರೆ	71	01	70
4	ಕೆಸ್ತೂರು	02	00	02
5	ಹೆಬ್ಬೆರಳು	01	00	01
6	ಯರಗನಹಳ್ಳಿ	11	03	08
	ಹೆಮ್ಮನಹಳ್ಳಿ	39	08	31
	ಹನುಮಂತಪುರ	07	01	06
	ಕದಲೂರು	09	04	05
ಒಟ್ಟು		**298**	**76**	**222**

ಇ) ಬಂದಿರುವುದಿಲ್ಲ.

ಈ) ಭೂಮಾಲೀಕರುಗಳು ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಪರಿಹಾರವನ್ನು ನೀಡಿರುವುದಿಲ್ಲ.

ಉ) ಭೂಮಾಲೀಕರು ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ಕೂಡಲೇ ಪರಿಶೀಲಿಸಿ ಪರಿಹಾರ ವಿತರಿಸಲಾಗುವುದು.